ಶ್ರೀ ಕೆ. ಜಯರಾಮ ಶೆಟ್ಟಿ : ನಾನು ಕಳಪೆ ದರ್ಜೆಯ ಅಕ್ಕಿಯನ್ನು ತಂದಿದ್ದೇನೆ. ಅದನ್ನು ತಮ್ಮ ಗಮನಕ್ಕೆ ನಾನು ತರುತ್ತಿದ್ದೇನೆ.

ಅಧ್ಯಕ್ಷರು : ಅಧನ್ನು ಸರ್ಕಾರಕ್ಕೆ ಕಳುಹಿಸಿ ಕೊಡಿ.

(2) ತಮಿಳುನಾಡಿನ ಮುಖ್ಯಮಂತ್ರಿಯವರ ಮೇಲೆ ರಾಜ್ಯಪಾಲರಿಂದ ಖಟ್ಲೆ ಹಾಕಲು ಅನುಮತಿ

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾನು ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ಸದನಕ್ಕೆ ಸಂಬಂಧಪಟ್ಟಿದ್ದಲ್ಲವೆಂದು ನನಗೆ ಅರ್ಥವಾಗಿದೆ. ಅಥವಾ ಮಾನ್ಯ ವಾಟಾಳ್ ನಾಗರಾಜ್‌ರವರು ಏನೂ ಗೊತ್ತಿಲ್ಲದೇ ಇದನ್ನು ತರುತ್ತಿದ್ದಾರೆ ಎಂಬ ಭಾವನೆ ಯಾರಿಗೂ ಬರುವುದು ಬೇಡ. ನಾವೂ, ನೀವು ಚರ್ಚೆ ಮಾಡುವಾಗ ನೀವೂ ಕೆಲವು ವಿಚಾರಗಳನ್ನು ಹೇಳಿದಿರಿ, ನಾನೂ ಕೆಲವು ವಿಚಾರಗಳನ್ನು ತಮ್ಮ ಜೊತೆ ಚರ್ಚೆ ಮಾಡಿದ್ದೇನೆ. ತಮಿಳ್ನಾಡಿನಲ್ಲಿ ಈಗ ಬಹಳ ಗಂಭೀರವಾದ ಪರಿಸ್ಥಿತಿ ನಿರ್ಮಾಣವಾಗಿದೆ. ತಮಿಳು ನಾಡಿನ ಮಾನ್ಯ ರಾಜ್ಯಪಾಲರು ಅಲ್ಲಿನ ಮುಖ್ಯಿ ಮಂತ್ರಿಯವರ ಮೇಲೆ ಖಟ್ಲೆಯನ್ನು ಹಾಕಲು ಅನುಮತಿ ನೀಡಿರುವ ನನಗೆ ಆ ಸರ್ಕಾರದ ಬಗ್ಗೆ ಒಳ್ಳೆಯ ಅಭಿಪ್ರಾಯವಿಲ್ಲ.

ಅಧ್ಯಕ್ಷರು : ದಯವಿಟ್ಟು ಬೇಡಿ. ಇದು ಹೊಸ ಸಂಪ್ರದಾಯವಾಗುತ್ತದೆ. ದಯವಿಟ್ಟು ಕೇಳಿ.

ಶ್ರೀ ವಾಟಾಳ್ ನಾಗರಾಜ್ : ನಾನು ಇನ್ನೂ ಮುಂದಕ್ಕೆ ಹೋಗಿಲ್ಲ. ತಾವು ಅವಕಾಶವನ್ನು ಕೊಟ್ಟರೆ ನಾನು ಮಾತನಾಡುತ್ತೇನೆ. ಹಿಂದೆ ನಾನು ಮಾನ್ಯ ರಾಜ್ಯಪಾಲರ ಬಗ್ಗೆ ಈ ಸದನದಲ್ಲಿ ಮಾತನಾಡಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಇವತ್ತು ಪತ್ರಿಕೆಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು : ದಯವಿಟ್ಟು ಬೇಡ. ಅವರು ಹೇಳಿಕೆ ಕೊಟ್ಟಿರುವುದು ಬೇರೆ.

ಶ್ರೀ ಹೆಚ್.ಡಿ. ದೇವೇಗೌಡ : ಪಾಯಿಂಟ್ ಆಫ್ ಆರ್ಡರ್. ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಹೊರಗಡೆ ಏನು ಬೇಕಾದರೂ ಹೇಳಿಕೊಳ್ಳಲಿ. ಆದರೆ ಈ ಸದನದಲ್ಲಿ ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ದಯವಿಟ್ಟು ಅವಕಾಶ ಕೊಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದು ಒಳ್ಳೆಯ ಸಂಪ್ರದಾಯವಲ್ಲ. ಮಾನ್ಯ ರಾಜ್ಯಪಾಲರ ನೀತಿಯನ್ನು ನಾನು ವಿರೋಧಿಸುತ್ತೇನೆ. ನಾಳೆ ಈ ಮುಖ್ಯಿ ಮಂತ್ರಿಯ ಮೇಲೆ ಮಾಡುತ್ತಾರೆ. ಪ್ರಜಾಪ್ರಭುತ್ವದಲ್ಲಿ ರಾಜ್ಯಪಾಲರುಗಳು ಮುಖ್ಯಿಮಂತ್ರಿಗಳ ಮೇಲೆ

(ಗೊಂದಲ)

ಅಧ್ಯಕ್ಷರು : ಡೋಂಟ್ ರೆಕಾರ್ಡ್. Let us create a new precedent.

(3) ಸದನದ ಹೊರಗಡೆ ಸರ್ಕಾರದ ಪಾಲಿಸಿ ವಿಚಾರಗಳನ್ನು ಪ್ರಸ್ತಾವನೆ

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, ನಾವು ಒಂದು ಸತ್ಸಂಪ್ರದಾಯವನ್ನು ಹಾಕಿಕೊಂಡು ಬಂದಿದ್ದೇವೆ. ಸದನವು ನಡೆಯುವ ಕಾಲದಲ್ಲಿ ಪಾಲಿಸಿ ವಿಚಾರಗಳಿಗೆ ಸಂಬಂಧಪಟ್ಟಂತೆ ಯಾವುದೇ ವಿಚಾರವನ್ನೂ ಸದನದಿಂದ ಹೊರಗಡೆ ಪ್ರಸ್ತಾಪ ಮಾಡಬಾರದು ಎಂದು ಇದೆ. ಆದರೆ ನಾನು ಈಗ ಪ್ರಿವಿಲೇಜ್ ವಿಚಾರವನ್ನು ಹೇಳುತ್ತಿಲ್ಲ. ನಿನ್ನೆಯ ದಿವಸ ಪೊಲೀಸ್ ಅಧಿಕಾರಿಗಳಿಗೆ ಕೊಟ್ಟಿರತಕ್ಕ ಎಮಾಲ್ಯುಮೆಂಟ್ಸ್‌ನ್ನೆಲ್ಲಾ ಹೊರಗಡೆಯೇ ಅನೌನ್ಸ್ ಮಾಡಿದ್ದಾರೆ. ಮುಂದೆ ಇಂಥಾದ್ದು